VIJAYAKUMAR KANNUR
VIJAYAKUMAR KANNUR
Date: 2026.02.11 15:04:21 +0530

**CC 547/2022**
**ಡಿ.ಡಬ್ಲ್ಯೂ.1**

**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮುಧೋಳ</u>**

| | | |
|---|---|---|
| ಹೆಸರು | : | ಲೋಕಣ್ಣ ತಂದೆ ವೆಂಕಪ್ಪ ಶಿರಬೂರ |
| ತಂದೆಯ ಹೆಸರು | : | ವೆಂಕಪ್ಪ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ನಾಗರಾಳ, ಮುಧೋಳ ತಾಲೂಕು |

<u>ಸಾಕ್ಷಿಗೆ ಇಂದು ದಿನಾಂಕ 10.02.2026 ರಂದು ಪ್ರಮಾಣವಚನ ಬೋಧಿಸಲಾಯಿತು.</u>
**<u>ಮುಖ್ಯವಿಚಾರಣೆಃ ಶ್ರೀ ಎಸ್ ಎಸ್ ಡಿ ವಕೀಲರಿಂದ ಆರೋಪಿಯ ಪರವಾಗಿ</u>**

ನಾನು ದೂರುದಾರ ಬ್ಯಾಂಕಿನಲ್ಲಿ ರೂ. 1 ಲಕ್ಷ ಹಣವನ್ನು ಮಾತ್ರ ಸಾಲವಾಗಿ 2018 ರಲ್ಲಿ ಪಡೆದುಕೊಂಡಿರುವೆನು. ನಾನು ಈ ದೂರಿನಲ್ಲಿ ಹೇಳಿರುವಂತೆ ರೂ. 5 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ. ನನಗೆ ಕೇವಲ ರೂ. 1 ಲಕ್ಷ ಹಣ ನೀಡಿದ್ದು, ಉಳಿದ ರೂ. 4 ಲಕ್ಷ ಹಣವನ್ನು ಆ ಬ್ಯಾಂಕಿನ ಮಾನ್ಯೇಜರ್ ವೆಂಕಟೇಶ ನಾಯಕ ಎಂಬುವವನು ಪಡೆದಿರುವನು. ನನ್ನ ಸಹಿಯನ್ನು ಖುಲ್ಲಾ ಚೆಕ್ ಗಳ ಮೇಲೆ ಪಡೆದಿರುವರು. ನನ್ನ ಕಡೆಯಿಂದ ರೂ. 1 ಲಕ್ಷ ಹಣದ ಸಾಲದ ಹಣದ ಭದ್ರತೆಗಾಗಿ ಅಂತ ಚೆಕ್ ನ್ನು ನನ್ನ ಕಡೆಯಿಂದ ಪಡೆದಿರುವರು. ನನಗೆ ನಿಪಿ 5 ರಂತೆ ಯಾವುದೇ ನೋಟಿಸು ಜಾರಿಯಾಗಿರುವುದಿಲ್ಲ. ದೂರುದಾರ ಬ್ಯಾಂಕಿನವರು ನನ್ನ ಖಾತೆಗೆ ರೂ. 1 ಲಕ್ಷ ಹಣ ವರ್ಗಾವಣೆ ಮಾಡಿ ಅದರಲ್ಲಿ ನಾನು ರೂ. 20 ಸಾವಿರಗಳ ಕಂತುಗಳ ಮೂಲಕ ನನಗೆ ಒಟ್ಟು ರೂ. 1 ಲಕ್ಷ ಹಣ ನೀಡಿರುವರು. ನಾನು 2019 ರಲ್ಲಿ ದೂರುದಾರ ಬ್ಯಾಂಕಿಗೆ ರೂ. 26 ಸಾವಿರ ಹಣ ಈ ಸಾಲದ ಹಣದಲ್ಲಿ ಮರುಸಂದಾಯ ಮಾಡಿರುವೆನು.

2. ಜನವರಿ ತಿಂಗಳ 2019 ರಲ್ಲಿ ಪುನಃ ನಾನು ರೂ. 22 ಸಾವಿರ ಸಾಲದ ಕಂತನ್ನು ಮರು ಸಂದಾಯ ಮಾಡಿರುವೆನು. ನನ್ನ ಕಡೆಯಿಂದ ಒಚರ್ ಗಳ ಮೇಲೆ ದೂರುದಾರ ಬ್ಯಾಂಕಿನ ಮ್ಯಾನೇಜರಾದ ವೆಂಕಟೇಶ ನಾಯಕ ಎಂಬುವವನು ಸಹಿ ಮಾಡಿಸಿಕೊಂಡಿರುವನು. ಒಟ್ಟು 4 ಒಚರ್ ಗಳ ಮೇಲೆ ಸಹಿ ಮಾಡಿಸಿಕೊಂಡಿರುವನು. ನನಗೆ ದೂರುದಾರ ಬ್ಯಾಂಕಿನಿಂದ ನೋಟಿಸು ಬಂದಿರುವುದು, ಆದರೆ ಅದನ್ನು ನಾನು ತೆಗೆದುಕೊಂಡಿರುವುದಿಲ್ಲ ಅಂತ ಮರಳಿ ಹೋಗಿರುವುದು, ಆಗ ಬ್ಯಾಂಕಿನವರು ನನಗೆ ಫೋನ್ ಮೂಲಕ ನೋಟಿಸು ಏಕೆ ತೆಗೆದುಕೊಂಡಿರುವುದಿಲ್ಲ ಎಂದು ವಿಚಾರಿಸಿರುವರು. ಆಗ ವಿಚಾರಿಸಲಾಗಿ ನಾನು ರೂ. 1 ಲಕ್ಷ

ಸಾಲ ಪಡೆದಿದ್ದರು ಸಹ ರೂ. 5 ಲಕ್ಷ ಹೇಗೆ ನನ್ನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಸಾಲ ಇರುವುದಾಗಿ ಎಂದು ನಾನು ವಿಚಾರಿಸಿರುವೆನು. ಆಗ ಆ ಬ್ಯಾಂಕಿನಿಂದ ವೆಂಕಟೇಶ ನಾಯಕ ಮ್ಯಾನೇಜರ ವರ್ಗಾವಣೆಯಾಗಿ ಹೋಗಿರುವನು. ನಂತರ ದೂರುದಾರ ಬ್ಯಾಂಕಿನವರು ನನ್ನ ವಿರುದ್ದ ಈ ಪ್ರಕರಣ ದಾಖಲು ಮಾಡಿರುವರು. ನಾನು ವಿಚಾರಿಸಲಾಗಿ ಬ್ಯಾಂಕಿನ ಮ್ಯಾನೇಜರ್ ರೂ. 4 ಲಕ್ಷ ಪಡೆದುಕೊಂಡು ಹಗರಣ ಮಾಡಿ ಹೋಗಿರುವುದು ನನಗೆ ಗೊತ್ತಾಗಿರುವುದು. ಈ ಬ್ಯಾಂಕ್ ಮ್ಯಾನೇಜರನ್ನು ಸೇವೆಯಿಂದ ವಜಾಗೊಳಿಸಿರುವರು.

ಪಾಟೀ ಸವಾಲುಃ ದೂರುದಾರ ಪರ ವಕೀಲರು ಸಮಯಾವಕಾಶ ಕೋರುತ್ತಾರೆ, ಸಮಯಾವಕಾಶ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿ ಅದೆ.

ಸಾಕ್ಷಿದಾರರ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಮುಧೋಳ.